25	ಎ ಪ್ರಸಾದ್ ಬಿನ್ ಎ. ಲಂಬೋದರಪ್ಪ, ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ	8
26	ಭೂಪಾಳಂ ಎನ್. ಸತ್ಯನಾರಾಯಣ ಬಿನ್ ಭೂಪಾಳಂ ಆರ್ ನಂಜುಂಡಯ್ಯ, ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ	6
27	ಹೆಚ್. ಮಹೇಶ್ವರ ಶೆಟ್ಟಿ ಬಿನ್ ಹೆಚ್.ಎನ್. ಹನುಮಂತ ಶೆಟ್ಟಿ, ಗಾಡಿಕೊಪ್ಪ ಗ್ರಾಮ ಶಿವಮೊಗ್ಗ	7
28	ಎಸ್ ಜಿ. ಆನಂದ್ ಬಿನ್ ಎಸ್. ಗಣೇಶ್ ರಾವ್ ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ	6
29	ಕೆ. ನಂಜಪ್ಪ ಬಿನ್ ಕಾಮಣ್ಣ ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ	4
30	ರಾಮಣ್ಣ ಯಾನೆ ರಾಮಯ್ಯ ಬಿನ್ ಯಲ್ಲಪ್ಪ ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ	4
	ಒಟ್ಟು ನಿವೇಶನಗಳ ಸಂಖ್ಯೆ	181

ಹಿರೇಕೆರೂರು ಪಟ್ಟಣಕ್ಕೆ ಕುಡಿಯುವ ನೀರು ಪೂರೈಕೆ

815(1083) ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) : ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿರೇಕೆರೂರು ಪಟ್ಟಣಕ್ಕೆ ಕೆ.ಯು.ಡಬ್ಲ್ಯೂ.ಎಸ್. ಯೋಜನೆಯಡಿ ಕುಡಿಯುವ ನೀರು ಸರಬರಾಜು ಕಾಮಗಾರಿ ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು):

ಅ) ಸಣ್ಣ ಮತ್ತು ಮಧ್ಯಮ ನಗರ/ಪಟ್ಟಣ ಅಭಿವೃದ್ಧಿ ಯೋಜನೆಯಡಿ ಹಿರೇಕೆರೂರು ಪಟ್ಟಣದ ನೀರು ಸರಬರಾಜು ಯೋಜನೆಯನ್ನು ಈಗಾಗಲೇ ಕೈಗೊಂಡಿದ್ದು ಯೋಜನೆಗೆ ಸಂಬಂಧಿಸಿದ ಎಲ್ಲಾ ಘಟಕಗಳನ್ನು ಕೈಗೆತ್ತಿಕೊಂಡು ಪೂರ್ತಿಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಮೂಲ ಸ್ಥಾವರದಿಂದ ದುರ್ಗಾದೇವಿ ಕೆರೆಯವರೆಗೆ 5 ಕಿ.ಮಿ. ಉದ್ದಕ್ಕೆ 406 ಮಿ.ಮಿ. ವ್ಯಾಸದ ಎಂ.ಎಸ್. ಕೊಳವೆ ಮಾರ್ಗ ಜೋಡಣೆ ಕಾಮಗಾರಿಯನ್ನು ಸಹ ಈಗಾಗಲೇ ಕೈಗೆತ್ತಿಕೊಳ್ಳಲಾಗಿದೆ. ಈ ಕೊಳವೆ ಮಾರ್ಗದ ತುಮ್ಮಿನಕಟ್ಟಿ ಹಾಗೂ ರಟ್ಟಿಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಕೊಳವೆ ಮಾರ್ಗ ಜೋಡಣೆಯ ಕೆಲಸವನ್ನು ಹೊರತುಪಡಿಸಿ ಎಲ್ಲಾ ಕೆಲಸ ಪೂರ್ತಿಗೊಂಡಿದೆ. ತುಮ್ಮಿನಕಟ್ಟಿ ಹಾಗೂ ರಟ್ಟಿಹಳ್ಳಿ ಗ್ರಾಮದ ಜನರು ಕೊಳವೆ ಮಾರ್ಗದ ಜೋಡಣೆಗೆ ಅಡಚಣೆ ಉಂಟು ಮಾಡಿದ್ದರಿಂದ ಕಾಮಗಾರಿಯ ಪ್ರಗತಿ ಕುಂಠಿತವಾಗಿದೆ. ಈ ವಿಷಯವನ್ನು ಜಿಲ್ಲಾಡಳಿತ ಗಮನಕ್ಕೆ ತಂದು ಪೂರ್ಣಗೊಳಿಸಲು ಅಗತ್ಯಕ್ರಮ ಕೈಗೊಳ್ಳಲಾಗುತ್ತಿದೆ.

ಔರಾದ್ ಪಟ್ಟಣಕ್ಕೆ ಒಳ ಕ್ರೀಡಾಂಗಣ ನಿರ್ಮಾಣ

816 (909) ಶ್ರೀ ಪ್ರಭು ಚೌವ್ಹಾಣ್ (ಔರಾದ್) : ಮಾನ್ಯ ಪ್ರವಾಸೋದ್ಯಮ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಔರಾದ್ ಪಟ್ಟಣಕ್ಕೆ ಒಳ ಕ್ರೀಡಾಂಗಣ ಮಂಜೂರು ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಒಳ ಕ್ರೀಡಾಂಗಣಕ್ಕೆ ಸರ್ಕಾರ ಮಂಜೂರು ಮಾಡಿರುವ ಹಣವೆಷ್ಟು? (ಸಂಪೂರ್ಣ ವಿವರ ನೀಡುವುದು);